ಅಂಡರ್‌ಟೇಕಿಂಗ್ಸ್ ಕಮಿಟಿಯವರು ಯಾವುದನ್ನು ಪಾಯಿಂಟ್ ಔಟ್ ಮಾಡುತ್ತಾರೆ, ಅವ್ಯವಹಾರಕ್ಕೆ ಅಧಿಕಾರಿಗಳು ಕಾರಣ ಎಂದು ಯಾರ ಬಗ್ಗೆ ಹೇಳುತ್ತಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಕಾಪುವಿನಲ್ಲಿರುವ ಕ.ವಿ. ಮಂಡಳಿಯಲ್ಲಿ ಸಾಮಗ್ರಿಗಳು ದೊರೆಯದೆ ಇರುವುದು

೨೧೪೬. ಶ್ರೀ ವಸಂತ ವಿ. ಸಾಲ್ಯಾನ್ (ಕಾಪು).—ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳನ್ನು ದಯವಿಟ್ಟು ಉತ್ತರಿಸುವರೇ ?

ಅ) ಕಾಪು ಕ್ಷೇತ್ರದಲ್ಲಿರುವ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಇಲಾಖೆಯ ಸಾಮಗ್ರಿಗಳು ಇಲ್ಲದೆ ಕೆಲಸ ಕಾರ್ಯಗಳು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸಾಮಗ್ರಿಗಳನ್ನು ಪೂರೈಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಲಕ್ಷ್ಮೀನರಸಿಂಹಯ್ಯ (ರಾಜ್ಯ ವಿದ್ಯುತ್ ಮಂತ್ರಿಗಳು).—

ಅ) ಸಾಮಗ್ರಿಗಳ ಅಭಾವದಿಂದ ಉಡುಪಿ ತಾಲ್ಲೂಕಿನಲ್ಲಿ ಕೆಲಸಗಳು ಸ್ಥಗಿತಗೊಂಡಿಲ್ಲ, ನಿಗಧಿತ ಗುರಿಯನ್ನು ಸಾಧಿಸಿರುವುದಲ್ಲದೇ ಗುರಿಯನ್ನು ಮೀರಿ ಪ್ರಗತಿ ಸಾಧಿಸಲಾಗಿದೆ.

ಆ) ನಿಗಧಿತ ವಾರ್ಷಿಕ ಗುರಿ ಸಾಧಿಸಲು ಸಾಕಷ್ಟು ಸಾಮಗ್ರಿಗಳನ್ನು ಸರಬರಾಜು ಮಾಡಲಾಗುತ್ತಿದೆ.

ಶ್ರೀ ವಿ ವಸಂತ ಸಾಲಿಯಾನ.—ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರದಲ್ಲಿ ಗುರಿ ಸಾಧಿಸಿದ್ದೇವೆ ಎಂದು ಹೇಳಿದ್ದಾರೆ ತಾಲ್ಲೂಕು ಮಿಾಟಿಂಗ್‌ನಲ್ಲಿ ಅಧಿಕಾರಿಗಳು ಗುರಿ ಸಾಧಿಸಲಿಕ್ಕೆ ಸಾಮಾನುಗಳ ಕೊರತೆ ಇದೆ. ಆದ್ದರಿಂದ ಗುರಿ ಸಾಧಿಸಲಿಕ್ಕೆ ಆಗಲಿಲ್ಲ ಎಂದು ಹೇಳಿದ್ದಾರೆ. ಎರಡನೇ ಪ್ರಶ್ನೆ ಏನೆಂದರೆ ಐ.ಆರ್.ಡಿ.ಪಿ. ಮತ್ತು ನೂರು ಬಾವಿಗಳ ಯೋಜನೆ ಮತ್ತು ಕೃಷಿ ಸಾಲಗಳ ಮುಖಾಂತರ ಸಾಲ ಪಡೆದುಕೊಂಡು ರೈತರು ಹಾಕಿಕೊಂಡಿರುವ ಪಂಪ್ ಸೆಟ್‌ಗಳಿಗೆ ವಿದ್ಯುತ್ ಕನೆಕ್ಷನ್ ಮಾಡದೇ ಇರುವ ಪರಿಸ್ಥಿತಿ ಉದ್ಭವವಾಗಿದೆ. ಟ್ರಾನ್ಸ್‌ಫಾರ್ಮರ್ ಕೊರತೆ ಇದೆ, ಕಂಬಗಳು ಮತ್ತು ಇತರೆ ಸಾಮಗ್ರಿಗಳ ಕೊರತೆ ಇದೆ, ಎಂದು ವಿದ್ಯುತ್ ಕನೆಕ್ಷನ್ ಕೊಡದಿರುವುದರಿಂದ ಗ್ರಾಮಾಂತರ ಪ್ರದೇಶದ ಕೃಷಿಕರಿಗೆ ತೊಂದರೆಯಾಗಿದೆ ಆದ್ದರಿಂದ ದಯವಿಟ್ಟು ಸಂಬಂಧಪಟ್ಟ ಅಧಿಕಾರಿಗಳಿಗೆ ಮತ್ತು ಇಲಾಖೆಗೆ ಕೂಡಲೇ ಬೇಕಾದ ಸಾಮಗ್ರಿಗಳನ್ನು ಕೊಟ್ಟು ಗ್ರಾಮಾಂತರ ಪ್ರದೇಶದ ಜನರಿಗೆ ಆದಷ್ಟು ಜಾಗ್ರತೆ ಪಂಪ್‌ಸೆಟ್ಟಿಗೆ ಕನೆಕ್ಷನ್ ಕೊಡುವಂಥ ರೀತಿಯಲ್ಲಿ ಆದೇಶ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

(ಮಾನ್ಯ ಅಧ್ಯಕ್ಷರು ಪೀಠದಲ್ಲಿದ್ದರು)

ಶ್ರೀ ಲಕ್ಷ್ಮೀನರಸಿಂಹಯ್ಯ.—ಸನ್ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದ ಗುರಿಳ ಸಾವಿರ ಸಾಧನೆ ಮಾಡಿರತಕ್ಕದ್ದು ೪೯.೫೪೬. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗುರಿ ೨೫೬೦ ಸಾಧನೆ ೨೬೪೭. ಉಡುಪಿ ತಾಲ್ಲೂಕಿನಲ್ಲಿ ಸಾಧಿಸಬೇಕಾದ್ದು ೭೫೦ ಈಗ ಕೆಲಸ ಮಾಡಿ ಮುಗಿಸಿರುವುದು ೭೫೭. ಇದನ್ನು ನೋಡಿದರೆ ಏನೂ ಗುರಿ ಹಾಕಿಕೊಂಡಿದ್ದೇವೆ ಅದನ್ನೆಲ್ಲಾ ಸಾಧನೆ ಮಾಡಿದ್ದೇವೆ ಎಂಬುದು ಗೊತ್ತಾಗುತ್ತದೆ. ಜೊತೆಗೆ ಉಡುಪಿ ತಾಲ್ಲೂಕಿನಲ್ಲಿ ೆವಿನ್ಯೂ ಗ್ರಾಮಗಳ ವಿದ್ಯುತ್ತೀಕರಣದಲ್ಲಿ ೧೦೦ಕ್ಕೆ ೧೦೦ರಷ್ಟು ಪ್ರಗತಿಯನ್ನು ಸಾಧಿಸಿದ್ದೇವೆ. ಬೇಡಿಕೆ, ಗುರಿಗಿಂತ ಒಂದೂವರೆಯಷ್ಟು ಹೆಚ್ಚು ಇದೆ. ೧೯೮೩ನೇ ಇಸವಿಗಿಂತ ಮುಂಚೆ ೧೯ ಸಾವಿರಕ್ಕಿಂತ ಹೆಚ್ಚಿನ ಗುರಿ ಇರಲಿಲ್ಲ, ಅಂಥದ್ದರಲ್ಲಿ ೪೦ ಸಾವಿರ ನಿಗದಿ ಮಾಡಿ ಗುರಿ ಮೀರಿ ಸಾಧನೆ ಮಾಡುತ್ತಿದ್ದೇವೆ ಉತ್ಪಾದನೆ ೩/೨ ಭಾಗ ಆಗುತ್ತಿದೆ. ಮೊದಲು ಮೂರನೆಯ ಒಂದು ಭಾಗ ಉತ್ಪಾದನೆ ಆಗುತ್ತಿರಲಿಲ್ಲ. ಅಂತಹ ಸಮಯದಲ್ಲಿ ಗುರಿಯನ್ನು ಸಾಧನೆ ಮಾಡಿದ್ದೇವೆ. ಈ ಸಾಲವನ್ನು ಪಡೆದಂತ ವ್ಯಕ್ತಿಗಳಿಗೆ ಅದ್ಭತೆಯ ಮೇರೆಗೆ ವಿದ್ಯುತ್ತನ್ನು ಒದಗಿಸುತ್ತಿದ್ದೇವೆ ಪಿ.ಎಲ್.ಡಿ. ಮುಂತಾದ ಬ್ಯಾಂಕುಗಳಲ್ಲಿ ಸಾಲ ತೆಗೆದುಕೊಂಡವರಿಗೆ ಅದ್ಭತೆ ಮೇಲೆ ನೀಡಿದ್ದೇವೆ. ಆದರೆ ಯಾವ ಯೋಚನೆಯನ್ನು ಮಾಡದೆ ಕೆಲವು ಕಡೆಗಳಲ್ಲಿ ಬ್ಯಾಂಕ್‌ಗಳಲ್ಲಿ ಸಾಲ ತೆಗೆದುಕೊಂಡಾಗ ಇಂತಹ ಸಮಸ್ಯೆಗಳು ಉದ್ಭವವಾಗುತ್ತದೆ ಏನೆ ಆಗಲಿ ಆ ಜಾಗದಲ್ಲಿ ಉಳಿದಿರತಕ್ಕ ಪಂಪ್ ಸೆಟ್ಟುಗಳಿಗೆ ಆದಷ್ಟು ಬೇಗ ವಿದ್ಯುತ್ತನ್ನು ಸರಾಜು ಮಾಡುವ ವ್ಯವಸ್ಥೆ ಮಾಡುತ್ತೇವೆ.